26.10.2021 CC 209-2015

ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**
**(ಸಿವಿಲ್)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್.209–೨೦೧೫**

.ವಿರುದ್ಧ

ಪಿ.ಡಬ್ಲ್ಯೂ:೯
ಸಿ.ಡಬ್ಲ್ಯೂ:೨೧

ಹೆಸರು :ರಮೇಶ್ ಕುಮಾರ್ ಹೆಚ್.ಬಿ.
ತಂದೆ ಹೆಸರು : ಬೈರಪ್ಪ
ವಯಸ್ಸು : ೪೯ ವರ್ಷ
ಉದ್ಯೋಗ : ಡಿ.ವೈ.ಎಸ್.ಪಿ.,ಬಳ್ಳಾರಿ
ವಾಸಸ್ಥಳ : ಬಳ್ಳಾರಿ

ದಿ: ೨೬.೧೦.೨೦೨೧ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ೦೨.೧೦.೨೦೧೩ ರಿಂದ ೧೫.೦೫.೨೦೧೫ ವರೆಗೆ ಹೊಸಕೋಟೆ ಪೊ.ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ: ೩೦.೧೦.೨೦೧೩ ರಂದು ಈ ಪ್ರಕರಣದ ಕಡತವನ್ನು ಚಾ.ಸಾ.೨೦ ರವರಿಂದ ವಹಿಸಿಕೊಂಡು, ಅದೇ ದಿನ ವಾಹನದ ಯಾಂತ್ರಿಕ ತಪಾಸಣೆಗಾಗಿ ವಾಹನ ನೀರೀಕ್ಷಕರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ವಾಹನದ ಮಾಲೀಕರಿಗೆ ಕಲಂ ೧೩೩ ಐ.ಎಂ.ವಿ ಆಕ್ಟ್ ರಡಿಯಲ್ಲಿ ನೋಟಿಸ್ಸನ್ನು ನೀಡಿರುತ್ತೇನೆ. ಸದರಿ ನೋಟಿಸ್ಸನ್ನು ಈಗಾಗಲೇ ನಿಪಿ.೬ ಎಂದು, ಸಾಕ್ಷಿ ಸಹಿಯನ್ನು ನಿಪಿ.೬(ಬಿ) ಎಂದು ಗುರುತಿಸಲಾಯಿತು. ಅವರಿಂದ ನೋಟಿಸಿಗೆ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ.೭ ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.೭(ಬಿ) ಎಂದು ಗುರುತಿಸಲಾಯಿತು. ಕೆ.ಎಸ್.ಆರ್.ಟಿ.ಸಿ ಡಿಪೋ ಮ್ಯಾನೇಜರ್ ರಿಂದ ವಾಹನದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತನ ಚಾಲನ ಪರವಾನಿಗೆ ಮತ್ತು ವಾಹನದ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನನ್ನು ಬಂಧೀಸಿ, ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ತಡೆ ಹಿಡಿದ ವಾಹನವನ್ನು ಕೆ.ಎಸ್.ಆರ್.ಟಿ.ಸಿ.ಡಿಪೋ ಮ್ಯಾನೇಜರ್

ರಿಂದ ಬಾಂಡ್ ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಸದರಿ ಬಾಂಡ್ ಅನ್ನು ಈಗಾಗಲೇ ನಿಪಿ.೮ ಎಂದು , ಸಾಕ್ಷಿಯ ಸಹಿಯನ್ನು ನಿಪಿ.೮(ಬಿ) ಎಂದು ಗುರುತಿಸಲಾಯಿತು. ಚಾ.ಸಾ.೨ರವರ ಮರುಹೇಳಿಕೆ ಪಡೆದುಕೊಂಡಿರುತ್ತೇನೆ. ದಿ: ೧೫.೧೧.೨೦೧೩ ರಂದು ಹೊಸಕೋಟೆ ಸರ್ಕಾರಿ ಆಸ್ಪತ್ರೆಯಿಂದ ಮೃತನ ಮರಣೋತ್ತರ ತನಿಖಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ.೧೦ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೧೦(ಎ) ಎಂದು ಗುರುತಿಸಲಾಯಿತು. ದಿ: ೦೫.೧೧.೨೦೧೩ ರಂದು ಚಾ.ಸಾ.೩ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಗಾಯಾಳು ಇವರಿಗೆ ಇಂಡೆಮನಿಟಿ ಬಾಂಡ್ ಅನ್ನು ಪಡೆದುಕೊಂಡು, ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಬಾಂಡ್ ಅನ್ನು ನಿಪಿ.೧೧ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೧೧(ಎ) ಎಂದು ಗುರುತಿಸಲಾಯಿತು. ದಿ: ೨೮.೦೨.೨೦೧೪ ವಾಹನದ ಯಾಂತ್ರಿಕ ತಪಾಸಣಾ ವರದಿಯನ್ನು ಪಡೆದುಕೊಂಡಿರುತ್ತೇನೆ, ಅದನ್ನು ನಿಪಿ.೯ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೯(ಬಿ) ಎಂದು ಗುರುತಿಸಲಾಯಿತು. ದಿ: ೨೪.೦೩.೨೦೧೪ ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ.೧೨ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೧೨(ಎ) ಎಂದು ಗುರುತಿಸಲಾಯಿತು. ತನಿಖೆ ಮುಗಿದಿದ್ದರಿಂದ ಆರೋಪಿತನ ವಿರುದ್ದ ದೋಷಾರೋಪಹಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು</u>: ಆರೋಪಿ ಪರ ಶ್ರೀ ಡಿ.ಎಲ್.ಎಸ್ ವಕೀಲರಿಂದ

ಚಾ.ಸಾ.೨೪ ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡಿರುವ ಕುರಿತು ಡೈರಿಯಲ್ಲಿ ಬರೆದುಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಾನು ಸರಿಯಾಗಿ ತನಿಖೆ ಮಾಡದೇ ಮೃತರ ಕುಟುಂಬಕ್ಕೆ ವಿಮೆ ಪರಿಹಾರ ದೊರೆಯುವಂತೆ ಆರೋಪಿತನ ವಿರುದ್ದ ಸುಳ್ಳು ದೋಷಾರೋಪಹಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾದ ರೀತಿಯಲ್ಲಿ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ನೀಡದೇ ಕಛೇರಿಯಲ್ಲಿ ಪಂಚನಾಮೆ, ನಕಾಶೆ, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ವಾಹನದ ಯಾಂತ್ರಿಕ ತಪಾಸಣಾ ವರದಿಯನ್ನು ನಮ್ಮ ತನಿಖೆಗೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** –ಇಲ್ಲ–

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**